ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	28
2	ಸದಸ್ಯರ ಹೆಸರು	:	ಶ್ರೀ ಎನ್ ರವಿಕುಮಾರ್
3	ಉತ್ತರಿಸಬೇಕಾದ ದಿನಾಂಕ	:	16.07.2019
4	ಉತ್ತರಿಸಬೇಕಾದ ಸಚಿವರು	:	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ಎಷ್ಟು ಪ್ರಮಾಣದ ವೈದ್ಯಕೀಯ ಸೀಟುಗಳನ್ನು ಬಿಟ್ಟು ಕೊಡಬೇಕಾಗಿದೆ; ಈ ಕುರಿತು ಸರ್ಕಾರಕ್ಕೂ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗೂ ಇರುವ ಒಪ್ಪಂದವೇನು;	ಸರ್ಕಾರ ಮತ್ತು ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳ ನಡುವೆ ಯಾವುದೇ ಪರಸ್ಪರ ಒಡಂಬಡಿಕೆಯು ಒಪ್ಪಂದವಾಗಿರುವುದಿಲ್ಲ. ಆದರೆ ಕೆಲವು ಡೀಮ್ಡ್ ಯುನಿವರ್ಸಿಟಿ ಕಾಲೇಜುಗಳು ಉದಾಹರಣೆಗೆ: ಯೆನೆಪೋಯ ವೈದ್ಯಕೀಯ ಕಾಲೇಜ್ & ಆಸ್ಪತ್ರೆ, ಮಂಗಳೂರು ಮತ್ತು ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು ಕಾಲೇಜುಗಳು ಪ್ರಾರಂಭವಾದಾಗ ಸರ್ಕಾರದ ಜೊತೆ ಎಂ.ಓ.ಯು ಮಾಡಿಕೊಂಡು ಹೆಚ್ಚುವರಿಯಾದ ಸೀಟುಗಳಲ್ಲಿ ಶೇಕಡ 25%ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ.
ಆ	2019-20ನೇ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ವೈದ್ಯಕೀಯ ಎಷ್ಟು ಸೀಟುಗಳನ್ನು ಬಿಟ್ಟು ಕೊಡುತ್ತಿವೆ; ಹಾಗೂ ನೀಡದಿರುವ ಸೀಟುಗಳೆಷ್ಟು; ಯಾವ ಕಾರಣಕ್ಕೆ ನೀಡುತ್ತಿಲ್ಲ;	ಡೀಮ್ಡ್ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವಾಗ ಸರ್ಕಾರದೊಂದಿಗೆ MOU ಮಾಡಿಕೊಂಡಿರುವಂತೆ ಈ ಕೆಳಕಂಡಂತೆ ಸೀಟುಗಳನ್ನು ಬಿಟ್ಟುಕೊಡುತ್ತಿವೆ. (ಕೆಳಗಿನ ಕೋಷ್ಟಕ ನೋಡಿ)

ಕ್ರ.ಸಂ	ಸಂಸ್ಥೆಯ ಹೆಸರು	ಸೀಟು
1.	ಜವಹರಲಾಲ್ ನೆಹರು ಮೆಡಿಕಲ್ ಕಾಲೇಜು, ಬೆಳಗಾವಿ	12
2.	ಜೆಎಸ್ಎಸ್ ಕಾಲೇಜು, ಮೈಸೂರು	12
3.	ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು	52
4.	ಕೆ.ಎಸ್ ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು	12
5.	ಯೆನಪೋಯ ಮೆಡಿಕಲ್ ಕಾಲೇಜು, ಮಂಗಳೂರು	13
	ಒಟ್ಟು	**101**

ಈ ಕೆಳಕಂಡ ಕಾಲೇಜುಗಳು ಸರ್ಕಾರದೊಂದಿಗೆ MOU ಮಾಡಿಕೊಂಡಿರುವುದಿಲ್ಲ.

1. ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ.
2. ಶ್ರೀ ಬಿ.ಎಲ್.ಡಿ.ಇ ವೈದ್ಯಕೀಯ ಕಾಲೇಜು, ಬಿಜಾಪುರ.
3. ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು.

		ಮುಂದುವರೆದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಡೀಮ್ಡ್ ಯೂನಿವರ್ಸಿಟಿಯ ಎಲ್ಲಾ ಸೀಟುಗಳನ್ನು ಬಿಟ್ಟುಕೊಡುವಂತೆ ಕೇಂದ್ರ ಸರ್ಕಾರವು ಆದೇಶಿಸಿದ್ದು, ಆದೇಶದ ಉದ್ಧೃತ ಭಾಗ ಕೆಳಕಂಡಂತಿದೆ **" Please note that as per directions of the Supreme Court of India all Deemed Universities are required to contribute 100% of Recognized and Permitted Medical/Dental seats. Therefore, in case any increase of UG seats such newly created seats must also be contributed immediately, as and when permission letter is received."**
ಇ	ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟು ಕೊಡದಿರುವ ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ: ಸೀಟು ಬಿಟ್ಟು ಕೊಡದಿರುವ ವೈದ್ಯಕೀಯ ಕಾಲೇಜುಗಳು ಸರ್ಕಾರಕ್ಕೆ ಪಾವತಿ ಮಾಡಿರುವ ದಂಡದ ಮೊತ್ತವೆಷ್ಟು:	ಯೆನೆಪೋಯ ವೈದ್ಯಕೀಯ ಕಾಲೇಜ್ & ಆಸ್ಪತ್ರೆ, ಮಂಗಳೂರು ಮತ್ತು ಕೆ.ಎಸ್.ಹೆಗಡೆ ಮೆಡಿಕಲ್ ಅಕಾಡೆಮಿ, ಮಂಗಳೂರು ಕಾಲೇಜುಗಳ ವಿರುದ್ಧ ಪ್ರವೇಶಾತಿಗಾಗಿ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗಿದ್ದು, ಹೆಚ್ಚು ಸೀಟುಗಳನ್ನು ವಾಪಸ್ ಪಡೆಯಲು ಕ್ರಮ ಜರುಗಿಸಲಾಗಿರುತ್ತದೆ.
ಈ	ಡೀಮ್ಡ್ ಯುನಿವರ್ಸಿಟಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರವು ಯಾವ ಯಾವ ರಿಯಾಯಿತಿ ಸೌಲಭ್ಯಗಳನ್ನು ನೀಡುತ್ತಿದೆ?	ಯಾವುದೇ ರಿಯಾಯಿತಿ ಸೌಲಭ್ಯಗಳನ್ನು ನೀಡುತ್ತಿಲ್ಲ.

ಸಂಖ್ಯೆ: ಎಂಇಡಿ /50/ಎಂಎಸ್ಎಫ್/2019

(ಈ ತುಕಾರಾಮ್)
ವೈದ್ಯಕೀಯ ಶಿಕ್ಷಣ ಸಚಿವರು.